# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 621

ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 22.07.2024

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಆಶಾ ಕಾರ್ಯಕರ್ತೆಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಒಟ್ಟು 42524 (ಗ್ರಾಮೀಣ - 39195 ಮತ್ತು ನಗರ -3329) ಆಶಾ ಕಾರ್ಯಕರ್ತೆಯರ ಹುದ್ದೆಗಳು ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಮಂಜೂರಾಗಿವೆ.<br>ಪ್ರಸ್ತುತ 40896 (ಗ್ರಾಮೀಣ -37795 ಮತ್ತು ನಗರ - 3101) ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ.<br>ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಆಶಾ ಕಾರ್ಯಕರ್ತೆಯರಿಗೆ ನೀಡಲಾಗುವ ಗೌರವ ಧನವೆಷ್ಟು; ಪ್ರತಿ ತಿಂಗಳು ಗೌರವ ಧನ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಆಶಾಕಾರ್ಯಕರ್ತೆಯರಿಗೆ ನೀಡಲಾಗುವ ಗೌರವಧನದ ಮಾಹಿತಿ ಈ ಕೆಳಗಿನಂತಿದೆ:<br>• ರಾಜ್ಯ ಸರ್ಕಾರದಿಂದ ಮಾಸಿಕ ರೂ.5,000/-ಗಳ ಗೌರವಧನವನ್ನು ಏಪ್ರಿಲ್-2022 ರಿಂದ ನೀಡುತ್ತಿದ್ದು, 12 ಷರತ್ತುಗಳನ್ನು ವಿಧಿಸಲಾಗಿದೆ. ಈ ಅನುದಾನವನ್ನು ಸಂಪೂರ್ಣವಾಗಿ ರಾಜ್ಯಸರ್ಕಾರದಿಂದ ಭರಿಸಲಾಗುತ್ತಿದೆ.<br>• ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ 42 ಆರೋಗ್ಯ ಸಂಬಂಧಿ ಚಟುವಟಿಕೆಗಳಿಗೆ ಕಾರ್ಯನಿರ್ವಹಣಾ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ (42 ಚಟುವಟಿಕೆಗಳ ಮಾಹಿತಿಯನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ). ಈ ಪ್ರೋತ್ಸಾಹ ಧನಕ್ಕೆ ಕೇಂದ್ರ ಸರ್ಕಾರದಿಂದ ಶೇ.60 ಮತ್ತು ರಾಜ್ಯ ಸರ್ಕಾರದಿಂದ ಶೇ.40 ರ ಅನುಪಾತದಲ್ಲಿ ಅನುದಾನ ಭರಿಸಲಾಗುತ್ತದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ/29/ಟಿಎಆರ್/2020, ದಿ:19-10/2020 ರ ಪ್ರಕಾರ ಪ್ರತಿ ಮಾಹೆ ಆಶಾಕಾರ್ಯಕರ್ತೆಯರಿಗೆ ಪಾವತಿಸಬೇಕಾದ ರಾಜ್ಯಸರ್ಕಾರದ ಗೌರವಧನ ಮತ್ತು ರಾಷ್ಟ್ರೀಯ ಆರೋಗ್ಯಅಭಿಯಾನದ ಪ್ರೋತ್ಸಾಹಧನವನ್ನು DBT portal ಮುಖಾಂತರ ಪಾವತಿ ಪ್ರಕ್ರಿಯೆಯನ್ನು ಮಾಡಲಾಗುತ್ತಿದೆ. |

| | | |
|---|---|---|
| ಇ) | ಆಶಾ ಕಾರ್ಯಕರ್ತೆಯರು ಗ್ರಾಮೀಣ ಆರೋಗ್ಯ ಸೇವೆಯಲ್ಲಿ ಅತೀ ಅವಶ್ಯಕತೆ ಇರುವ ತಳಮಟ್ಟದ ಆರೋಗ್ಯ ಕಾರ್ಯಕರ್ತೆಯರಾಗಿದ್ದು, ಅವರನ್ನು ಖಾಯಂಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಆಶಾಕಾರ್ಯಕರ್ತೆಯರ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ಅರೆಕಾಲಿಕವಾಗಿದ್ದು, ಪೂರ್ಣಕಾಲಿಕ ಸ್ವರೂಪದಲ್ಲಿರುವುದಿಲ್ಲ. ಇವರಿಗೆ ನೀಡುವ ಗೌರವಧನ/ ಪ್ರೋತ್ಸಾಹಧನವು ಸಂಪೂರ್ಣವಾಗಿ ಕಾರ್ಯನಿರ್ವಹಣೆಗೆ ಒಳಪಟ್ಟಿರುತ್ತದೆ. ಇವರ ಸೇವೆಯು ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿರುವುದರಿಂದ ಆಶಾಕಾರ್ಯಕರ್ತೆಯರನ್ನು ಖಾಯಂಮಾಡಲು ನಿಯಾಮಾನುಸಾರ ಸಾಧ್ಯವಿರುವುದಿಲ್ಲ. |
| ಈ) | ಡೆಂಗ್ಯೂ ಜ್ವರದ ಜಾಗರೂಕತೆ ಹಾಗೂ ಔಷಧಿ ವಿತರಣೆಯಲ್ಲಿ ಎಷ್ಟು ಆಶಾ ಕಾರ್ಯಕರ್ತೆಯರು ತೊಡಗಿಕೊಂಡಿದ್ದಾರೆ; ಈ ಆಶಾ ಕಾರ್ಯಕರ್ತೆಯರಿಗೆ ನೀಡಲಾಗುತ್ತಿರುವ ಸೌಲಭ್ಯಗಳೇನು; ಆಶಾ ಕಾರ್ಯಕರ್ತೆಯರಿಗೆ ಬಿ.ಪಿ.ಎಲ್ ಕಾರ್ಡ್ ನೀಡಲು ಕ್ರಮ ಕೈಗೊಳ್ಳಲಾಗಿದೆಯೇ? | ಡೆಂಗೀ ಜ್ವರದ ಜಾಗರೂಕತೆ ಅಂದರೆ ಮುಂಜಾಗೃತ ಕ್ರಮವಾಗಿ ಆಶಾಕಾರ್ಯಕರ್ತೆಯರು ತಮ್ಮ ವ್ಯಾಪ್ತಿಯ ಪ್ರತಿಯೊಂದು ಮನೆಗೂ 15 ದಿನಕ್ಕೆ ಒಂದು ಬಾರಿ ಭೇಟಿ ನೀಡಿ ಮನೆಯ ಒಳಗಿನ ಹಾಗೂ ಹೊರಾಂಗಣದಲ್ಲಿರುವ ಎಲ್ಲಾ ನೀರಿನ ಶೇಖರಣೆಗಳನ್ನು ಸಮೀಕ್ಷಿಸಿ ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರುತಿಸಿ ಲಾರ್ವಾನಾಶಕ ದ್ರಾವಣಗಳನ್ನು ಬೆರೆಸಿ ತಕ್ಷಣವೇ ನಿರ್ಮೂಲನೆ ಮಾಡಲು ಕ್ರಮಕೈಗೊಂಡಿರುತ್ತಾರೆ. ಆದ್ದರಿಂದ ಗ್ರಾಮದಲ್ಲಿಯೇ ವಾಸವಿರುವ ಆಶಾಕಾರ್ಯಕರ್ತೆಯರು ವರ್ಷದ ಎಲ್ಲಾ ತಿಂಗಳಗಳಲ್ಲೂ ಈಡಿಸ್ ಲಾರ್ವಾ ಸಮೀಕ್ಷೆ ಹಾಗೂ ಉತ್ಪತ್ತಿ ತಾಣನಾಶಕಾರ್ಯವನ್ನು ದೈನಂದಿನ ಚಟುವಟಿಕೆಯಾಗಿ ನಡೆಸುತ್ತಿರುತ್ತಾರೆ.<br><br>ಈ ಚಟುವಟಿಕೆಯನ್ನು ನಡೆಸುವ ಪ್ರತಿ ಆಶಾಗೆ ಮಾಸಿಕ ರೂ.200/- ರಂತೆ ಗೌರವಧನವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದ ಅನುಮೋದಿತ ಅನುದಾನದಲ್ಲಿ ನಿಯಮಾನುಸಾರ ಪಾವತಿಸಲಾಗುತ್ತಿದೆ.<br><br>ಆಶಾ ಕಾರ್ಯಕರ್ತೆಯರು ಮೂಲತಃ ಬಿಪಿಎಲ್ ಕುಟುಂಬಗಳ ಹಿನ್ನೆಲೆಯಿಂದ ಬಂದಿದ್ದು, 750 ಆಶಾ ಕಾರ್ಯಕರ್ತೆಯರು ಮಾತ್ರ ಎಪಿಎಲ್ ಪ್ರವರ್ಗಕ್ಕೆ ಸೇರಿರುತ್ತಾರೆ. |

ಸಂಖ್ಯೆ: ಆಕುಕ 40 ಎಸ್.ಟಿ.ಕ್ಯೂ 2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಅನುಬಂಧ-1

ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆಗೆ ಅನುಸಾರವಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪ್ರೋತ್ಸಾಹಧನವನ್ನು 42 ಚಟುವಟಿಕೆಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

### ಎ. ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1 | ಗ್ರಾಮ ಆರೋಗ್ಯ ಮತ್ತು ಪೌಷ್ಟಿಕ ಆಹಾರ ದಿನಾಚರಣೆಯಲ್ಲಿ ಭಾಗಿಯಾದರೆ | 200 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಸಿಕ ಸಭೆಗೆ ಹಾಜರಾದರೆ | 150 |
| 3 | ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಪೌಷ್ಟಿಕಾಂಶ ಸಮಿತಿ ಸಭೆಯನ್ನು ನಡೆಸಿದರೆ | 150 |
| 4 | ಗರ್ಭಿಣಿಯರ ಪಟ್ಟಿಯ ನಿರ್ವಹಣೆ | 300 |
| 5 | ಅರ್ಹದಂಪತಿಗಳ ಪಟ್ಟಿಯನ್ನು ತಯಾರಿಸುವುದು | 300 |
| 6 | ಮನೆ ಮನೆ ಸಮೀಕ್ಷೆ | 300 |
| 7 | ಗ್ರಾಮ ಆರೋಗ್ಯ ಪುಸ್ತಕದ ನಿರ್ವಹಣೆಗೆ | 300 |
| 8 | ಚುಚ್ಚುಮದ್ದು ಸೇವೆಗಳಿಗೆ ಅರ್ಹ ಮಕ್ಕಳ ಪಟ್ಟಿಯನ್ನು ತಯಾರಿಸಿದರೆ | 300 |

### ಬಿ. ಕಾರ್ಯನಿರ್ವಹಣಾ ಪ್ರೋತ್ಸಾಹಧನಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1. | ಗರ್ಭಿಣಿ ಆರೈಕೆಗೆ | 300 |
| 2. | ಸಾಂಸ್ಥಿಕ ಹೆರಿಗೆಯನ್ನು ಉತ್ತೇಜಿಸಿದರೆ | 300/200 |
| 3. | ತಾಯಿ ಮರಣದ ವರದಿ | 200 |
| 4. | ಗೃಹದಾರಿತ ನವಜಾತ ಶಿಶು ಆರೈಕೆ | 250 |
| 5. | ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸುವುದು ಮತ್ತು ಆರೋಗ್ಯ ಸಂಸ್ಥೆಗಳಿಗೆ ಶಿಫಾರಸು ಮಾಡುವುದು. | 300 |

| | | |
|---|---|---|
| 6. | ಚುಚ್ಚುಮದ್ದು ಸೇವೆಗಳಿಗೆ ಫಲಾನುಭವಿಗಳನ್ನು ಸಂಘಟಿಸುವುದು. | 150 |
| 7. | ಮೊದಲ ವರ್ಷದ ಚುಚ್ಚುಮದ್ದು ಸೇವೆಗಳಿಗೆ | 100 |
| 8. | ಎರಡನೇ ವರ್ಷದ ಚುಚ್ಚುಮದ್ದು ಸೇವೆಗಳು | 75 |
| 9. | 5–6 ವರ್ಷದ ಮಕ್ಕಳಿಗೆ ಡಿ.ಪಿ.ಟಿ ಬೂಸ್ಟರ್ ಲಸಿಕೆಯನ್ನು ಕೊಡಿಸಿದರೆ | 50 |
| 10. | ಪಿ.ಪಿ.ಐ.ಯು.ಸಿ.ಡಿ ಯನ್ನು ಅಳವಡಿಸಿಕೊಳ್ಳಲು ಉತ್ತೇಜಿಸಿದರೆ | 150 |
| 11. | ಪುರುಷರನ್ನು ಸಂತಾನ ನಿರೋಧ ಚಿಕಿತ್ಸೆಗೆ ಉತ್ತೇಜಿಸಿದರೆ | 200 |
| 12. | ಸ್ತ್ರೀಯರನ್ನು ಸಂತಾನ ನಿರೋಧ ಚಿಕಿತ್ಸೆಗೆ ಉತ್ತೇಜಿಸಿದರೆ | 150 |
| 13. | ಅನಪೇಕ್ಷಿತ ಗರ್ಭಧಾರಣೆಗೆ ವೈದ್ಯಕೀಯ ಗರ್ಭಪಾತಕ್ಕೆ ಆಪ್ತ ಸಮಾಲೋಚನೆಗೆ | 100 |
| 14. | ಎರಡು ಜನನದ ನಡುವೆ ಅಂತರವನ್ನು ಖಾತ್ರಿಪಡಿಸಿದರೆ | 500 |
| 15. | ಪಿ.ಎ.ಐ.ಯು.ಸಿ.ಡಿ ಅಳವಡಿಕೆಗೆ ಪ್ರೋತ್ಸಾಹಿಸುವುದು | 150 |
| 16. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಬಹುವಿಧ ಔಷಧಿ ಕ್ಷಯ ರೋಗ ಚಿಕಿತ್ಸೆ ನೀಡಿದರೆ | 5000 |
| 17. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೊಸ ಮತ್ತು ಹಿಂದಿನ ಆರೈಕೆ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1500 |
| 18. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೆಚ್–ಮಾನೋಪಲಿ ರೆಜಿಮನ್ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1000 |
| 19. | ಕುಷ್ಠರೋಗಿಗಳಿಗೆ (ಎಂ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 600 |
| 20 | ಕುಷ್ಠರೋಗಿಗಳಿಗೆ (ಪಿ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 400 |
| 21. | ಕುಷ್ಠ ರೋಗಿಗಳನ್ನು ಗುರುತಿಸುವಿಕೆ | 250 |
| 22 | ಮಲೇರಿಯಾ ರೋಗಕ್ಕೆ ಚಿಕಿತ್ಸೆ | 50 |
| 23 | ಸಂಶಯಾಸ್ಪದ ಮಲೇರಿಯಾ ಪ್ರಕರಣಗಳ ಸ್ಲೈಡ್ ತಯಾರಿಸುವುದು | 150 |
| 24 | ಉಪ್ಪಿನ ಪರೀಕ್ಷೆ | 25 |
| 25 | ಹೆಚ್‌ಬಿವೈಸಿ | 250 |
| 26 | ಎನ್‌ಸಿಡಿ ಚಟುವಟಿಕೆಗಳು | 110 |

| | | |
|---|---|---|
| 27. | ePMSMA ಗೆ ಗಂಡಾಂತರ ಗರ್ಭಿಣಿಯರನ್ನು ಕರೆದೊಯ್ಯದರೆ – 100 (ಪ್ರತಿ ಭೇಟಿಗೆ), ಗರಿಷ್ಠ ಮೂರು ಭೇಟಿಗಳು. | 100 (ಪ್ರತಿ ಭೇಟಿಗೆ), ಗರಿಷ್ಠ ಮೂರು ಭೇಟಿಗಳು. |
| 28. | ಗಂಡಾಂತರ ಬಾಣಂತಿಯರ ಮನೆ ಭೇಟಿಗೆ (ಹೆಚ್.ಬಿ.ಎನ್.ಸಿ ಮಾದರಿಯಲ್ಲಿ) | 250 |

## ಸಿ. ಸಮೀಕ್ಷೆಗಳು/ದಿನಾಚರಣೆಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1. | ಐಡಿಸಿಎಫ್ | 100 |
| 2. | ಬಹುವಿಧ ಔಷಧಿ ವಿತರಣಾ ಆಂದೋಲನ (ಎಂಡಿಎ)<br><br>ಸದರಿ ಆಂದೋಲನ ಆಯ್ದ ಜಿಲ್ಲೆಗಳಲ್ಲಿ ಒಟ್ಟು ಆರು ದಿನಗಳ ಆಂದೋಲನ ಪ್ರತಿ ದಿನಕ್ಕೆ ರೂ.100 ರಂತೆ. | 600 |
| 3. | ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ (ಎನ್‌ಡಿಡಿ) | 100 |
| 4. | ಸಕ್ರಿಯ ಕ್ಷಯ ರೋಗ ಪತ್ತೆ ಆಂದೋಲನ (ಎಸಿಎಫ್) | 150 |
| 5. | ಕುಷ್ಠ ರೋಗ ಪತ್ತೆ ಆಂದೋಲನ (ಎಲ್‌ಸಿಡಿಸಿ)<br><br>ಸದರಿ ಆಂದೋಲನ ಆಯ್ದ ಜಿಲ್ಲೆಗಳಲ್ಲಿ ಒಟ್ಟು 14 ದಿನಗಳ ಆಂದೋಲನ ಪ್ರತಿ ದಿನಕ್ಕೆ ರೂ.75 ರಂತೆ. | 75 |
| 6. | ಲಾರ್ವಾ ಸಮೀಕ್ಷೆ (ಒಂದು ತಿಂಗಳಗೆ ಎರಡು ಬಾರಿ) | 200 |